(ಶ್ರೀ ಜೆ. ಎಲ್. ಕಬಾಡಿ)

ಬೇಕೆಂದು ಹೇಳಿದ್ದಾರೆ. ಈ ಫಾರಂಗಳನ್ನು ಸರ್ಕಾರಿ ಮುದ್ರಣಾಲಯದಿಂದ ಎಲ್ಲ ಕಡೆಗೂ ಕಳುಹಿಸಬೇಕು. ಈ ಫಾರಂಗಳು ರಾಜ್ಯದ ವಿವಿಧ ಭಾಗಗಳಲ್ಲಿ ಜನರಿಗೆ ಸಕಾಲದಲ್ಲಿ ಮುಟ್ಟದೆ ಇರುವುದಕ್ಕೆ ಕಾರಣ ಆಯಾ ಭಾಗದಲ್ಲಿರುವ ಬುಕ್ ಡಿಪೋಗಳಿಂದ ರೆಕಗ್ನೈಸ್ಡ್ ಡೀಲರ್ಸ್‌ಗೆ ಮಾರಿದ್ದಾರೆ. ಅವರು ಕಾಳಸಂತೆಯಲ್ಲಿ ಮಾರಾಟ ಮಾಡಲು ನಾರ್ಮಾಣಿಯ ಒಂದು ಫಾರಂಗೆ ಐದು, ಹತ್ತು ರೂಪಾಯಿ ತೆಗೆದುಕೊಳ್ಳುವುದಕ್ಕೆ ಇದು ಒಂದು ಸಮಯ ಎಂದು ತಿಳಿದುಕೊಂಡು ಮಾರುವುದರಿಂದ ಎಷ್ಟೋ ಜನರಿಗೆ ಫಾರಂಗಳು ಸಿಕ್ಕಿಲ್ಲ. ಹೀಗಾಗಿ ಡೇಟ್ ಬಾರ್ ಆಗಿರುವುದರಿಂದ ಎಷ್ಟೋ ಜನರಿಗೆ ಅರ್ಜಿ ಮಾಡಿಕೊಳ್ಳುವುದಕ್ಕೆ ಸಮಯವಾಗಲಿಲ್ಲ. ಅದಕ್ಕೋಸ್ಕರ ಜ್ಯೆಂ ವಿಸ್ತರಿಸುವುದಲ್ಲದೆ ರಿಕ್ರೂಟ್‌ಮೆಂಟ್ ಕಮಿಟಿ ಚೇರ್‌ಮನ್ ಅವರು ಒಂದು ರೀ ನೋಟಿಫಿಕೇಷನ್ ಹೊರಡಿಸಿದ್ದಾರೆ. ಅದರ ಪ್ರಕಾರ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಫಾರಂ ನಂಬರ್ 1 ರಲ್ಲಿ ಅರ್ಜಿ ಮಾಡಿಕೊಳ್ಳಬೇಕು. ಈ ನೋಟಿಫಿಕೇಷನ್‌ಗಳಲ್ಲಿ ತಿಳಿಸಿರುವಂತೆ 12 ಪೈಸೆಗೆ ಸಿಕ್ಕುವ ಫಾರಂಗಳಿವೆ ಮತ್ತು ನಾರ್ಮಾಣಿಗೆ ಒಂದರಂತೆ ಎರಡು ಫಾರಂ ತೆಗೆದುಕೊಂಡು ಕಳುಹಿಸಬೇಕಾಗುತ್ತದೆ. ಹೀಗಾಗಿ ಯಾವ ಫಾರಂನಲ್ಲಿ ಅರ್ಜಿ ಕಳುಹಿಸಬೇಕು ಎನ್ನುವ ಕನ್‌ಫ್ಯೂಷನ್ ಉಂಟಾಗಿದೆ. ಇದರ ಬಗ್ಗೆ ಕೂಡ ಜನರಿಗೆ ಸರಿಯಾಗಿ ತಿಳಿಸಬೇಕು.

Sri D. DEVARAJ URS.—We are not in a position to answer the question raised by Sri J. L. Kabadi. Let the Hon. Member bring the matter in the form of a subject to be disscussed on the floor of the House.

Sri H. SIDDAVEERAPPA (Minister for Health).—If there is any mistake, it can be rectified. ಮಾನ್ಯ ಸದಸ್ಯರು ದಯವಿಟ್ಟು ಕಾಗದ ಬರೆದರೆ ಆಗ ವಿಷಯ ತರಿಸಿ ಏನಾದರೂ ಅನಾನುಕೂಲವಿದ್ದರೆ ಅದನ್ನು ಸರಿಪಡಿಸೋಣ.

Purchase of bungalows by the Corporation.

ಶ್ರೀ ಟಿ. ಆರ್ ಶಾಮಣ್ಣ.—ಸರ್ಕಾರದವರು ಅರ್ಬನ್ ಪ್ರಾಪರ್ಟಿ ಸೀಲಿಂಗ್ ತರಬೇಕೆಂದಿದ್ದಾರೆ. ಪ್ರೈವೇಟ್ ಪಾರ್ಟಿಗಳು ದೊಡ್ಡ ದೊಡ್ಡ ಬಂಗಲೆಗಳನ್ನು ಕೊಂಡುಕೊಳ್ಳುವುದಕ್ಕೆ ಹಿಂದು ಮುಂದು ನೋಡುತ್ತಿದ್ದಾರೆ. ಕಾರ್ಪೊರೇಷನ್‌ನವರು 90 ಲಕ್ಷ ರೂಪಾಯಿಗಳ ಆಸ್ತಿಯನ್ನು ಅಕ್ವೈರ್ ಮಾಡಿಕೊಳ್ಳಲು ಪ್ರಯತ್ನ ಮಾಡಿದ್ದಾರೆ. ಈ ಬಂಗಲೆಗಳು ಪಬ್ಲಿಕ್ ಪರ್ಪಸ್‌ಗೆ ಬೇಕು ಎಂದು ಅನೇಕ ಬಂಗಲೆಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ರೈಲ್ವೆ ಸೇತುವೆಗಳ ಸಂಬಂಧದಲ್ಲಿ ಬೇಕು ಎಂದು 9 ಲಕ್ಷ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಇಟ್ಟಿದ್ದರೆ ಕಾರ್ಪೊರೇಷನ್‌ನವರು 90 ಲಕ್ಷ ರೂಪಾಯಿಗಳ ಆಸ್ತಿಯನ್ನು ಕೊಂಡುಕೊಳ್ಳುವುದಕ್ಕೆ ರೆಸಲ್ಯೂಷನ್ ಮಾಡಿದ್ದಾರೆ. ಸರ್ಕಾರದವರು ಇದರ ಬಗ್ಗೆ ಗಮನ ಕೊಟ್ಟು, ಈ ರೀತಿಯು ವ್ಯವಹಾರಗಳು ನಡೆಯದಂತೆ ಮಾಡಬೇಕು. ರಾತ್ರಿ ಹೊತ್ತು ವಿರೋಧ ಪಕ್ಷದ ಸದಸ್ಯರು ಹೊರಟು ಹೋದ ಮೇಲೆ ಮತ್ತು ಪ್ರೆಸ್‌ನವರು ಹೋದ ಮೇಲೆ ರೆಸಲ್ಯೂಷನ್‌ಗಳು ಪಾಸಾಗಿವೆ ಎಂದು ಬರೆದುಕೊಳ್ಳತಕ್ಕ ಪರಿಸ್ಥಿತಿ ಇದೆ. ಸರ್ಕಾರದವರು ಇದರ ಬಗ್ಗೆ ಸೂಕ್ತ ಗಮನ ಕೊಟ್ಟು, ಅಕ್ವೈಜಿಷನ್‌ಗೆ ಸಂಬಂಧಪಟ್ಟ ಫೈಲುಗಳನ್ನು ತರಿಸಿಕೊಂಡು ಇಂಥ ವ್ಯವಹಾರಗಳು ನಡೆಯದಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

Mr SPEAKER.—Now we shall proceed to General Discussion on the Revised Budget Estimates for 1972-73.

Revised Budget Estimates for 1972-73—General Discussion

(Debate continued)

†ಶ್ರೀ ಆರ್. ಗುಂಡುರಾವ್ (ಸೋಮವಾರಪೇಟೆ).—ಸನ್ಮಾನ್ಯ ಅಧ್ಯಕ್ಷರೇ, ಪ್ರಥಮವಾಗಿ ನಮ್ಮ ರಾಜ್ಯದ ಅರ್ಥ ಮಂತ್ರಿಗಳು ಬಹಳ ಪರಿಣಾಮಕಾರಿಯಾದ ಹಾಗೂ ಉತ್ತಮವಾದ ಆಯವ್ಯಯ ಪತ್ರವನ್ನು ಮಂಡಿಸಿದ್ದಕ್ಕಾಗಿ ಅದನ್ನು ಸ್ವಾಗತಿಸುತ್ತಾ, ನಾನು ಅವರಿಗೆ ವಂದನೆ